**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ನ್ಯಾಯಾಲಯ, ಮುಳಬಾಗಿಲು**

**ಓಎಸ್ ನಂ. 278/2021**

**ಪಿಡಬ್ಲ್ಯೂ: 1**

ದಿನಾಂಕಃ **12.06.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಯ ಪರ ವಕೀಲರಾದ ಶ್ರೀ ಎಂಎಲ್ ವಿ ರವರಿಂದಃ**

ದಾವಾ ಸ್ವತ್ತು ನನ್ನ ತಂದೆಯವರ ಪಿತ್ರಾರ್ಜಿತ ಸ್ವತ್ತಾಗಿರುತ್ತದೆ. ದಾವಾ ಸ್ವತ್ತು ಮತ್ತು ಇತರೆ ಸ್ವತ್ತುಗಳು ವೆಂಕಟರಾಯಪ್ಪ ಬಿನ್ ನಾಗಪ್ಪರವರಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಕರಾಬು ಸೇರಿ ಒಟ್ಟು 2 ಎಕರೆ 35 ಗುಂಟೆ ಎಂದರೆ ಸರಿಯಲ್ಲ. ದಿಃ08.02.1954 ರಂದು ದಾವಾ ಸ್ವತ್ತು 2 ಎಕರೆ 34 ಗುಂಟೆಯನ್ನು ವೆಂಕಟರಾಯಪ್ಪ ಬಿನ್ ನಾಗಪ್ಪರವರಿಂದ ಪ್ರತಿವಾದಿಯ ತಂದೆ ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಖರೀದಿಯ ನಂತರ ನನ್ನ ತಂದೆ ಮತ್ತು ಪ್ರತಿವಾದಿಯ ತಂದೆ ವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ನನ್ನ ತಂದೆ ಕಡಿಮೆ ಆಸ್ತಿ ನೀಡಿ ಅವರು ಹೆಚ್ಚಿನ ಆಸ್ತಿಯನ್ನು ಇಟ್ಟುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಸರ್ವೆ ನಂಬರ್ ನಲ್ಲಿ 1 ಎಕರೆ 11 ಗುಂಟೆ ನನ್ನ ತಂದೆಗೆ, ಉಳಿದ 1 ಎಕರೆ 23 ಗುಂಟೆ ಪ್ರತಿವಾದಿಯ ತಂದೆಗೆ ಬಂದಿರುತ್ತದೆ ಎಂದರೆ ಸಾಕ್ಷಿಯು 20 ಗುಂಟೆ ಪ್ರತಿವಾದಿಗೆ ಹೋಗಿರುತ್ತದೆ, 1 ಎಕರೆ ನಮಗೆ ಬಂದಿರುವುದಾಗಿ ನುಡಿಯುತ್ತಾರೆ.

1 ಎಕರೆ 11 ಗುಂಟೆ ನಮ್ಮ ತಂದೆಗೆ ಬಂದಿದ್ದು, ಚೆಕ್ಕುಬಂದಿ ಪೂರ್ವಕ್ಕೆ ಮತ್ತು ಪಶ್ಚಿಮಕ್ಕೆ ಪ್ರತಿವಾದಿಯ ತಂದೆ, ಉತ್ತರಕ್ಕೆ ವೆಂಕಟಮ್ಮರವರ ಸ್ವತ್ತು, ದಕ್ಷಿಣಕ್ಕೆ ಗುರ್ರಮ್ಮರವರ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ. ಈ ಸ್ವತ್ತನ್ನು ದಿಃ 15.04.1954 ರಂದು ವೆಂಕಟೇಶಪ್ಪರವರಿಗೆ ನನ್ನ ತಂದೆ ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಿಃ 07.03.1963 ರಂದು ನನ್ನ ತಂದೆ ಪುನಃ ಈ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಮೇಲೆ ಹೇಳಿದ 1 ಎಕರೆ 11 ಗುಂಟೆ ಚೆಕ್ಕುಬಂದಿಯನ್ನು ಒಳಗೊಂಡಿರುತ್ತದೆ ಎಂದರೆ ಗೊತ್ತಿಲ್ಲ. ದಿಃ 07.03.1963 ರಂದು ನನ್ನ ತಂದೆಗೆ ಪುನಃ ಖರೀದಿಸಲು

ಹಣದ ತೊಂದರೆ ಇದ್ದು, ಆ ಸಮಯದಲ್ಲಿ ನಾನು, ನನ್ನ ತಮ್ಮ ಮತ್ತು ಅಣ್ಣ ಅಪ್ರಾಪ್ತರಾಗಿದ್ದುದರಿಂದ ಕೊತ್ತೋಳ್ಳು ವೆಂಕಟಮ್ಮ ರವರಿಗೆ 500/– ರೂಳಿಗೆ ಬೋಗ್ಯ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಿಃ 14.04.1970 ರಲ್ಲಿ ನನ್ನ ತಂದೆ ಬೋಗ್ಯದಿಂದ 1 ಎಕರೆ 11 ವರೆ ಗುಂಟೆ ಆಸ್ತಿಯನ್ನು ಬಿಡಿಸಿಕೊಂಡು ಮಾರಾಟ ಮಾಡುವಾಗ 1 ಎಕರೆ 23 ಗುಂಟೆ ಎಂದು ತೋರಿಸಿ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ.

ದಿಃ 20.10.1975 ರಂದು ಪುನಃ ನನ್ನ ತಂದೆ ಗೋವಿಂದಪ್ಪರವರಿಂದ 1 ಎಕರೆ 23 ಗುಂಟೆ ಯನ್ನು ಖರೀದಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ದಿಃ 03.12.1975 ರಂದು ನನ್ನ ಪರವಾಗಿ ರಾಮಕೃಷ್ಣಪ್ಪರವರಿಗೆ 1 ಎಕರೆ 23 ಗುಂಟೆ ಎಂದು ತೋರಿಸಿ ಬೋಗ್ಯ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಪ್ರತಿವಾದಿಯು 1 ಎಕರೆ 23 ಗುಂಟೆಯಲ್ಲಿ ನಾನು ಸ್ವಾಧೀನದಲ್ಲಿ ಇಲ್ಲ ಎಂದು ತಹಶೀಲ್ದಾರ್ ರವರಿಗೆ ಅರ್ಜಿ ಸಲ್ಲಿಸಿದ್ದು, ತಹಶೀಲ್ದಾರ್ ರವರು ಏಸಿ ರವರಿಗೆ ರೆಪರ್ ಮಾಡಿ ನಂತರ ದಾಖಲೆಯನ್ನು ಪರಿಶೀಲಿಸಿ ಖಾತೆ ಮಾಡಲು ಆದೇಶ ಆಗಿದೆ ಎಂದರೆ ಗೊತ್ತಿಲ್ಲ.

ಈ ಹಿಂದೆ ಬೋಗ್ಯಕ್ಕೆ ನೀಡಲಾದ 1 ಎಕರೆ 11 ವರೆ ಗುಂಟೆಯ ಚೆಕ್ಕುಬಂದಿ ಪೂರ್ವಕ್ಕೆ ನಾರಾಯಣಪ್ಪ, ಪಶ್ಚಿಮಕ್ಕೆ ಕೋಳಿಫಾರಂ ವೆಂಕಟೇಶಪ್ಪ, ಉತ್ತರಕ್ಕೆ ಮುನಿವೆಂಕಟಪ್ಪ, ದಕ್ಷಿಣಕ್ಕೆ ರಾಮಚಂದ್ರಪ್ಪ. ಈ ದಾವೆಯನ್ನು 1 ಎಕರೆ ವಿಸ್ತೀರ್ಣಕ್ಕೆ ಸಲ್ಲಿಸಿರುತ್ತೇನೆ. ಸವೆ ನಂಬರ್ 117 ರಲ್ಲಿ 1 ಎಕರೆ ಹೊರತುಪಡಿಸಿ ಉಳಿದ ವಿಸ್ತೀರ್ಣದಲ್ಲಿ ಪ್ರತಿವಾದಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ . ಪ್ರತಿವಾದಿಯ ಸ್ವತ್ತಿನ ಪೂರ್ವಕ್ಕೆ ನಾವಿರುತ್ತೇವೆ, ಪಶ್ಚಿಮಕ್ಕೆ ಉತ್ತರಕ್ಕೆ ಮತ್ತು ದಕ್ಷಿಣಕ್ಕೆ ನಾಗರಾಜಪ್ಪ. ಪ್ರತಿವಾದಿಯು ಎಷ್ಟು ವಿಸ್ತೀರ್ಣಣದಲ್ಲಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಗೊತ್ತಿಲ್ಲ. ಆ ಸ್ವತ್ತಿನ ಬಗ್ಗೆ ಸರ್ವೆಯನ್ನು ಮಾಡಿಸಿದ್ದಾರಾ ಎಂದರೆ ಸಾಕ್ಷಿಯು ನಾನು ಮಾಡಿಸಿರುತ್ತೇನೆ ಎಂದು ನುಡಿದಿರುತ್ತಾರೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

ನನ್ನ ದೊಡ್ಡಪ್ಪನಿಗೆ 8 ಜನ ಗಂಡು ಮಕ್ಕಳು. ಆ 8 ಜನ ಮಕ್ಕಳು ವಿಭಾಗ ಮಾಡಿಕೊಂಡಿದ್ದು, ಅದರಲ್ಲಿ ಪೂರ್ವ ಮತ್ತು ಪಶ್ಚಿಮಕ್ಕೆ ಇರುವ ಸ್ವತ್ತನ್ನು ಪ್ರತಿವಾದಿಗೆ ನೀಡಲಾಗಿರುತ್ತದೆ ಎಂದರೆ ಗೊತ್ತಿಲ್ಲ.

(ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೆ. ಸ. ಇದೆ.

ಸಹಿ/–
(ಶ್ರೀಮತಿ ರೋಹಿಣಿ. ಡಿ)
ಅಪರ ಸಿ.ಜೆ ಮತ್ತು ಜೆಎಂಎಫ್ ಸಿ
ಮುಳಬಾಗಿಲು